## ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.

## ಸಿ.ಸಿ.ನಂ. 1183/2013

| | | |
|---|---|---|
| ಸಾಕ್ಷಿದಾರರ ಹೆಸರು | : | ಆಂತೋಣಿ ಎಸ್. |
| ತಂದೆಯ ಹೆಸರು | : | ಸೆಬಾಸ್ಟಿನ್ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕೇತಹಳ್ಳಿ ಫಾರಂ ಹೌಸ್, ಹೆಚ್.ಡಿ. ಕೋಟೆ ತಾ. |

(ಈ ಪ್ರಕರಣದ ಪಿರ್ಯಾದುದಾರರಾದ ಶ್ರೀಧರ್ ಬಂಗ ಮುಲ್ಕಿಯವರು ದಿನಾಂಕಃ 05.05.2012 ರಂದು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ದೂರು ಸಲ್ಲಿಸಿದ್ದು ನಂತರ ತನಿಖಾಧಿಕಾರಿಗಳು ತನಿಖೆ ನಡೆಸಿ ಅಂತಿಮ ಬಿ ವರದಿ ಸಲ್ಲಿಸಿದ್ದು, ಪಿರ್ಯಾದುದಾರರ ಮುಖ್ತ್ಯಾರ್ ನಾಮೆದಾರರು ಅದಕ್ಕೆ ತಕರಾರು ಸಲ್ಲಿಸಿದ್ದು ನಂತರ ಈ ನ್ಯಾಯಾಲಯವು ಅಂತಿಮ ಬಿ ವರದಿಯನ್ನು ರದ್ದುಪಡಿಸಿ ಆರೋಪಿಗಳ ವಿರುದ್ಧ ಸಂಜ್ಞೆ ತೆಗೆದುಕೊಂಡು ಸಮನ್ಸ್ ಹೊರಡಿಸಿರುತ್ತದೆ. ಅದರಂತೆ ಆರೋಪಿಗಳು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿರುತ್ತಾರೆ. ಆದ್ದರಿಂದ ದಂಡ ಪ್ರಕ್ರಿಯಾ ಸಂಹಿತೆಯ ಚಾಪ್ಟರ್ 19 ರಲ್ಲಿ ಹೇಳಿರುವಂತೆ ಪೋಲೀಸ್ ವರದಿಯ ಮೇಲಲ್ಲದೇ ಅನ್ಯತಾ ಹೂಡಲಾದ ಮೊಕದ್ದಮೆಗಳ ಅದಿವಿಚಾರಣೆಯನ್ನು ನಡೆಸುವ ಸಲುವಾಗಿ ಮತ್ತು ಆರೋಪಿಗಳ ವಿರುದ್ಧ ದೋಷಾರೋಪಣೆ ರಚಿಸಲು ಸಾಕಷ್ಟು ಆಧಾರಗಳು ಇರುತ್ತವೆ ಎಂಬ ಅಂಶಗಳನ್ನು ಪರಿಗಣಿಸಲು ಕಲಂ 244 ರಡಿಯಲ್ಲಿ ಪಿರ್ಯಾದುದಾರರ ವಿಚಾರಣೆ.)

**<u>ಸಾಕ್ಷಿಯನ್ನು ದಿನಾಂಕಃ 23.01.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರ ಶ್ರೀ. ಬಿ.ಎಂ. ವಕೀಲರಿಂದಃ</u>**

ಶ್ರೀಧರ ಬಂಗ ಮುಲ್ಕಿ ಎಂಬುವವರು ನನ್ನ ಪರವಾಗಿ 01 ವಿಶೇಷ ಮುಖ್ತ್ಯಾರ್ ನಾಮೆಯನ್ನು ಬರೆದುಕೊಟ್ಟಿದ್ದು, ಅದರ ಆಧಾರದ ಮೇಲೆ ನಾನು ಪಿರ್ಯಾದುದಾರರಿಗೆ ಸೇರಿದ ನಿವೇಶನಗಳ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದೇನೆ. ಕೇತಹಳ್ಳಿ ಗ್ರಾಮದ ಸ.ನಂ. 19/1 ರಲ್ಲಿ ಪಿರ್ಯಾದುದಾರರು ನಿವೇಶನ ಸಂಖ್ಯೆ 153 ಮತ್ತು 154 ನ್ನು

ಖರೀದಿಸಿದ್ದು ನಂತರ ಸಂಬಂಧಪಟ್ಟ ಪಂಚಾಯಿತಿಯಲ್ಲಿ ಅವರ ಹೆಸರಿಗೆ ಖಾತೆ ದಾಖಲಾಗಿರುತ್ತದೆ. ನಂತರ ನಾನು ಉಪ-ನೋಂದಣಾಧಿಕಾರಿ ಕಛೇರಿಗೆ ಹೋಗಿ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ತೆಗೆದುಕೊಂಡು ಪರಿಶೀಲಿಸಿದಾಗ ವೈಲೇಟ್ ಮೆನೆಂಜಸ್, ವಿಲಿಯಂ ಮೆನೆಂಜಸ್, ಮಾರ್ಕ್ ಜಾನ್ ರವಿ ಮೆನೆಂಜಸ್ ಮತ್ತು ವಿನಿತಾ ಮೆನೆಂಜಸ್ ಇವರುಗಳು ಈ ಮೇಲೆ ಹೇಳಿದ ನಿವೇಶನಗಳ ಮೇಲೆ ಮೈಸೂರಿನ ಕುವೆಂಪುನಗರದಲ್ಲಿರುವ ಭಾರತೀಯ ಸ್ಟೇಟ್ ಬ್ಯಾಂಕ್ ನಲ್ಲಿ ರೂ. 38,40,000/-ಗಳನ್ನು ಸಾಲ ಪಡೆದಿರುವುದು ಕಂಡುಬಂದಿರುತ್ತದೆ. ನಂತರ ನಾನು ಈ ವಿಷಯವನ್ನು ಪಿರ್ಯಾದುದಾರರಿಗೆ ತಿಳಿಸಿದಾಗ ಅವರು ದೂರು ಕೊಡುವಂತೆ ಹೇಳಿರುತ್ತಾರೆ. ಅವರ ನಿರ್ದೇಶನದ ಮೇರೆಗೆ ನಾನು ಹೆಚ್.ಡಿ. ಕೋಟೆ ಪೋಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತೇನೆ. ನಾನು ನೀಡಿದ ದೂರಿನ ಆಧಾರದ ಮೇಲೆ ಆರೋಪಿಗಳ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ. ನಂತರ ಪೋಲೀಸರು ಅಂತಿಮ 'ಬಿ' ವರದಿ ಸಲ್ಲಿಸಿರುತ್ತಾರೆ. ನಂತರ ನಾನು ಸದರಿ ಅಂತಿಮ 'ಬಿ' ವರದಿಗೆ ತಕರಾರು ಸಲ್ಲಿಸಿ ಪ್ರಶ್ನೆ ಮಾಡಿರುತ್ತೇನೆ. ಆದ್ದರಿಂದ ಆರೋಪಿಗಳು ವಂಚನೆ ಮಾಡಿರುವುದರಿಂದ ಅವರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಧರ್ ಬಂಗ ಮುಲ್ಕಿಯವರು ನನ್ನ ಹೆಸರಿಗೆ ಬರೆದುಕೊಟ್ಟಿರುವ ವಿಶೇಷ ಮುಖ್ತಾರ್ ನಾಮೆಯನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ವಿಶೇಷ ಮುಖ್ತಾರ್ ನಾಮೆಯನ್ನು ನೋಡಿ ಗುರುತಿಸಿದ್ದರಿಂದ, ಅದನ್ನು ನಿ.ಪಿ.-1 ಎಂದು ಗುರುತಿಸಲಾಯಿತು.

CC 1183/2013

<u>ಪಿ.ಡಬ್ಲೂ-01</u>

ನಾನು ಪೋಲೀಸ್ ಠಾಣೆಗೆ ನೀಡಿದ ದೂರನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಪೋಲೀಸ್ ಠಾಣೆಗೆ ನೀಡಿದ ದೂರು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿ.ಪಿ.-2 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-2(ಎ) ಎಂದು ಗುರುತಿಸಲಾಯಿತು.

ಹೆಚ್.ಡಿ. ಕೋಟೆ ಕಾರ್ಯನಿರ್ವಾಹಣಾಧಿಕಾರಿಗಳು ನೀಡಿದ ತಡೆಯಾಜ್ಞೆಯ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.-3 ಎಂದು ಗುರುತಿಸಲಾಯಿತು.

ಜಿ.ಬಿ. ಸರಗೂರು ಗ್ರಾಮ ಪಂಚಾಯಿತಿಯವರು ಟಿ. ನಾಗರಾಜು ರವರಿಗೆ ನೀಡಿರುವ ನೋಟೀಸಿನ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.-4 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಪಿರ್ಯಾದುದಾರರ ಪರ ವಕೀಲರು ಮುಂದಿನ ಮುಖ್ಯ ವಿಚಾರಣೆಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಓ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**